**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.**

**ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

**ಸಿ.ಸಿ.ನಂ.ಃ 611/13**

ಸಿ.ಡಬ್ಲ್ಯು. 13

ಪಿ.ಡಬ್ಲ್ಯು. 11

| | | |
|---|---|---|
| ಸಾಕ್ಷಿದಾರರ ಹೆಸರು | : | ಸೂರ್ಯನಾರಾಯಣ |
| ತಂದೆಯ/ಗಂಡನ ಹೆಸರು | : | ರಂಗರಾವ್ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಚೀಫ್ ಮೆನೇಜರ್, ಕೆ.ವಿ.ಜಿ. ಬ್ಯಾಂಕ್ |
| ವಾಸ್ತವ್ಯ | : | ಶಿಗ್ಗಾಂವ್ |

**(ಇಂದು ದಿನಾಂಕಃ 02-07-2019 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ನಾನು ದಿನಾಂಕ 21-11-2011 ರಿಂದ ಮಾರ್ಚ 2013 ರ ತನಕ ಕುಮಟಾ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ನಲ್ಲಿ ಸೀನಿಯರ್ ಮ್ಯಾನೇಜರ್ ಎಂದು ಕೆಲಸ ಮಾಡಿರುತ್ತೇನೆ.

**2.** ನಮ್ಮ ಬ್ಯಾಂಕ್‌ನ ಚಕ್‌ಗಳನ್ನು ನೋಡಿದರೆ ಗುರುತಿಸಬಹುದು. ನಿ.ಪಿ. 5 ಚಕ್‌ನ್ನು ಸಾಕ್ಷಿದಾರರು ನೋಡಿ ಅದು ತಮ್ಮ ಬ್ಯಾಂಕ್‌ಗೆ ಸಂಬಂಧಿಸಿದ್ದು ಎಂದು ನುಡಿಯುತ್ತಾರೆ. ಸದ್ರಿ ದಾಖಲಾತಿ ಪ್ರಕಾರ ದಿನಾಂಕ 21-02-2011 ರಂದು ಆರೋಪಿ ನಂ.1 ನಾಗವೇಣಿ ಕಾಮೇಶ್ವರ ಅಂಬಿಗ ಇವರ ಹೆಸರಿಗೆ ರೂ. 25,000-00 ನಗದೀಕರಣವಾಗಿರುತ್ತದೆ. ಸದ್ರಿ ಹಣವನ್ನು ಸ್ವೀಕರಿಸಿದ ಬಗ್ಗೆ ಸದ್ರಿ ನಾಗವೇಣಿ ಕಾಮೇಶ್ವರ ಅಂಬಿಗ ನಿ.ಪಿ.5 ರ ಹಿಂದುಗಡೆ ಸಹಿಯನ್ನು ಮಾಡಿರುತ್ತಾರೆ. ಈ ಪ್ರಕರಣದ ಸಂಬಂಧ ನಿ.ಪಿ.5 ಚಕ್‌ನ್ನು ಹಾಜರಪಡಿಸಬೇಕೆಂದು ಪೊಲೀಸರಿಂದ ಕೋರಿಕೆ ಪತ್ರ ಬಂದಿತ್ತು, ಯಾವ ಠಾಣೆ ಪೊಲೀಸರು ಎಂದು ಈಗ ನೆನಪಿಲ್ಲ,

ನಿ.ಪಿ.5 ನ್ನು ಜಪ್ತುಪಡಿಸುವ ಸಮಯ ಪೊಲೀಸರು ನಿ.ಪಿ.7 ರಂತೆ ಪಂಚನಾಮೆಯನ್ನು ಜರುಗಿಸಿದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿದಾರರು ತಮ್ಮ ಸಹಿಯನ್ನು ಗುರುತಿಸಿದ ಮೇರೆಗೆ ಅದನ್ನು ನಿ.ಪಿ. 7(ಬಿ) ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನಿ.ಪಿ.5 ಚೆಕ್‌ನ್ನು ಹಾಜರಪಡಿಸಿದ ಬಗ್ಗೆ ನಾನು ಪೊಲೀಸರಿಗೆ ಪತ್ರವನ್ನು ಬರೆದಿರುತ್ತೇನೆ. ಸದ್ರಿ ಪತ್ರ ದೃಢೀಕೃತ ನಕಲಾಗಿರುವುದರಿಂದ ಗುರುತಿಸಲಾಗಿಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಡಿ.ಆರ್. ವಕೀಲರಿಂದ ;-**

**1.** ಪೊಲೀಸರು ಯಾವ ದಿನಾಂಕದಂದು ಕೋರಿಕೆ ಪತ್ರ ಸಲ್ಲಿಸಿದ್ದರು ಎಂದು ಈಗ ಹೇಳಲು ಬರುವುದಿಲ್ಲ. ಯಾವ ದಿನಾಂಕದಂದು ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದು ಈಗ ಹೇಳಲು ಬರುವುದಿಲ್ಲ. ನನ್ನ ಶಾಖೆಗೆ ಬಂದು ಪೊಲೀಸರು ಹೇಳಿಕೆ ಪಡೆದಿದ್ದಾರೆ. ನಮ್ಮ ಶಾಖೆಯಲ್ಲಿ ಚಕನ್ನು ಸ್ವೀಕರಿಸುವ ವಿಭಾಗ ಪ್ರತ್ಯೇಕವಾಗಿದೆ ಎಂದರೆ ಸರಿ. ಸದ್ರಿ ವಿಭಾಗಕ್ಕೆ ಬಂದು ಚೆಕ್‌ನ್ನು ಹಾಜರಪಡಿಸಿದಾಗ ನಗದು ನೀಡಲಾಗುತ್ತದೆ ಎಂದರೆ ಸರಿ. ಚೆಕ್ ಹಿಂದುಗಡೆ ಸಹಿ ಮಾಡಿದವರೇ ಹಣ ಸ್ವೀಕರಿಸಿದ್ದಾರೆ ಎಂದು ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ, ಚೆಕ್ ಹಿಂದುಗಡೆ ಸಹಿ ಮಾಡಿದವರಿಗೆ ನಗದು ನೀಡುವುದು ನಮ್ಮ ಬ್ಯಾಂಕ್‌ನ ನಿಯಮ ಎನ್ನುತ್ತಾರೆ. ನಿ.ಪಿ. 5 ಚೆಕ್‌ನ ಹಿಂದುಗಡೆ ಇಬ್ಬರು ವ್ಯಕ್ತಿಗಳ ಸಹಿ ಇದೆ ಎಂದರೆ ಸರಿ. ನಿ.ಪಿ.5(ಎ) ಸಹಿ ಮತ್ತು ಚೆಕ್‌ನ ಹಿಂಬದಿ ಇರುವ ಇನ್ನೊಂದು ಸಹಿ ತಾಳೆಯಾಗುತ್ತದೆ ಎಂದರೆ ನನಗೆ ಹೇಳಲು ಬರುವುದಿಲ್ಲ. ಚೆಕ್‌ನ್ನು ಹಾಜರುಪಡಿಸಿದ ವ್ಯಕ್ತಿಯ ಸಹಿಯನ್ನು ಪಡೆದು ಆತನಿಗೆ ಹಣ ಬಟವಡೆ ಮಾಡುತ್ತೇವೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಸದ್ರಿ ಚೆಕ್‌ನಲ್ಲಿ ನಮೂದಿಸಿದ ವ್ಯಕ್ತಿಯ ಹೆಸರನ್ನು ಗಮನಿಸಿ ಆತನ ಸಹಿಯನ್ನು ಪಡೆದು ಹಣ ಬಟವಡೆ ಮಾಡುತ್ತೇವೆ ಎನ್ನುತ್ತಾರೆ. ಚೆಕ್ ಹಾಜರಪಡಿಸಿದ ವ್ಯಕ್ತಿಯ ಗುರುತಿನ ದಾಖಲೆಯನ್ನು ನಮ್ಮ ಬ್ಯಾಂಕ್‌ನಲ್ಲಿ ಪಡೆಯುವುದಿಲ್ಲ, ಹಾಗಾಗಿ ನಾಗವೇಣಿ ಕಾಮೇಶ್ವರ ಅಂಬಿಗ ಇವಳೇ ನಿ.ಪಿ.5 ಚೆಕ್‌ನ ಮೊತ್ತವನ್ನು ನಗದೀಕರಣ ಮಾಡಿಸಿಕೊಂಡಿರುತ್ತಾಳೆ ಎಂದು ಹೇಳಲು ಬರುವುದಿಲ್ಲ

ಎಂದರೆ ಸರಿ.ನಿ.ಪಿ.5 ಚೆಕ್‌ನ್ನು ಪೊಲೀಸರು ನಮ್ಮ ಶಾಖೆಗೆ ಬಂದು ಜಪ್ತುಪಡಿಸಿಕೊಂಡಿರುತ್ತಾರೆ. ಸದ್ರಿ ಸಮಯ ಯಾರು ನಮ್ಮ ಶಾಖೆಗೆ ಬಂದಿದ್ದರು ಎಂದು ಈಗ ನೆನಪಿಲ್ಲ. ನಿ.ಪಿ.7 ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಮಾಹಿತಿ ಇಲ್ಲ. ಸಾಕ್ಷಿ ಮುಂದುವರೆದು ಯಾವ ದಿನಾಂಕದಂದು ಚೆಕ್‌ನ್ನು ಹಾಜರಪಡಿಸಿ ನಗದೀಕರಣಗೊಳಿಸಲಾಗಿದೆ ಎಂದು ನಾನು ಹೇಳಿದ ಪ್ರಕಾರ ಪಂಚನಾಮೆಯಲ್ಲಿ ಬರೆಯಲಾಗಿದೆ ಎನ್ನುತ್ತಾರೆ. ನಾನು ಹೇಳುವಂತೆ 1ನೇ ಆರೋಪಿತೆ ನಿ.ಪಿ.5 ಚೆಕ್‌ನ್ನು ಹಾಜರಪಡಿಸಿ ರೂ. 25,000-00 ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೇಸಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ನಿ.ಪಿ.7 ರ ಪ್ರಕಾರ ಪಂಚನಾಮೆ ಜರುಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಜೆ.ಎಂ.ಎಫ್.ಸಿ. ಕುಮಟಾ.